ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ.ನಂಃ 1096/2020

ಪಿಡಬ್ಲ್ಯುಃ - 2
ಸಿಡಬ್ಲುಃ - 2

ದಿನಾಂಕಃ **26.08.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಪ್ರೇಮಾ |
| ಗಂಡನ ಹೆಸರು | - ಲಿಂಗಪ್ಪ |
| ವಯಸ್ಸು | - 56 ವರ್ಷ |
| ವೃತ್ತಿ | - ಕೂಲಿ ಕೆಲಸ |
| ವಾಸಸ್ಥಳ | - ಚೂರಿಕಾಡು, ಹಾಕತ್ತೂರು |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-1 ನನ್ನ ಮಗ. ಚಾಸಾ-5 ನನ್ನ ಸೊಸೆ. ಚಾಸಾ-3, 4, 6 ರಿಂದ 9 ನನ್ನ ಪರಿಚಯದವರು. 1 ನೇ ಆರೋಪಿ ನನ್ನ ಬಾವ. 2 ಮತ್ತು 3 ಆರೋಪಿತರು ನನ್ನ ಬಾವನ ಮಕ್ಕಳು. 4 ನೇ ಆರೋಪಿ 3 ನೇ ಆರೋಪಿಯ ಮಗ. ದಿಃ 06.08.2020 ರಂದು ನಮ್ಮ ಮನೆಯ ಮೇಲಿನಿಂದ ನಮ್ಮ ತೋಟಕ್ಕೆ ಮತ್ತು ಮನೆಗೆ ನೀರನ್ನು ಬರುವಂತೆ ಆರೋಪಿತರು ಬಿಟ್ಟಿದ್ದರು. ಸದರಿ ನೀರು ಮನೆಗೆ ಬರದಂತೆ ನಾನು ನೀರು ಹೋಗುವಂತೆ ಜಾಗ ಮಾಡಿದ್ದೆ. ಆಗ ನಾನು ಮತ್ತು ನನ್ನ ಮಗ ನೀರು ಹೋಗಲು ಆರೋಪಿತರು ಚರಂಡಿ ಮಾಡುತ್ತಿದ್ದುದನ್ನು ಪ್ರಶ್ನೆ ಮಾಡಿದ್ದಕ್ಕೆ ಆರೋಪಿತರು ನನಗೆ ಸೂಳೆ ಎಂದು, ನನ್ನ ಮಗನಿಗೆ ಸೂಳೆ ಮಗನೆ ಎಂದು ಬೈದಿರುತ್ತಾರೆ. ನನ್ನನ್ನು ಹೊಡೆದು ನನ್ನನ್ನು ಕೆಳಗೆ ದೂಡಿ ಹಾಕಿರುತ್ತಾರೆ. ನನ್ನನ್ನು ಕಾಲಿನಿಂದ ಒದ್ದಿರುತ್ತಾರೆ. ನನ್ನ ಮಗನನ್ನು ಹೊಡೆದು ಗುದ್ದಲಿಯಿಂದ ಕಾಲಿಗೆ ಕಡೆದಿರುತ್ತಾರೆ. ಆಗ ಚಾಸಾ-5 ರವರು ನಾವಿದ್ದ ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರು ಇನ್ನೊಮ್ಮೆ ನಮ್ಮ ಸುದ್ದಿಗೆ ಬಂದರೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ನನ್ನನ್ನು ಮತ್ತು ಚಾಸಾ-1 ರವರನ್ನು ಚಾಸಾ-6 ಮತ್ತು 8 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಎರಡು ಮೂರು ದಿನಗಳ ನಂತರ ಪೊಲೀಸರು ಸ್ಥಳಕ್ಕೆ ಬಂದು ಮಹಜರು ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಜಾಗವನ್ನು ನಾನೇ ತೋರಿಸಿಕೊಟ್ಟಿದ್ದೇನೆ. ಸಾಕ್ಷಿ ಮಹಜರನ್ನು ನೋಡಿ ತಮ್ಮ ಸಹಿ ಗುರುತಿಸಿರುತ್ತಾರೆ. ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-

2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಎಂಒ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ನಾನು ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ - ಆರೋಪಿತರ ಪರ ಶ್ರೀ. ಡಿ ಕೆ ಆರ್ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಕಾರಣ ತೋರದ ಕಾರಣ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ